"ರಾಷ್ಟ್ರೀಯ ಉಳಿತಾಯ ಪತ್ರದ ಆರನೇ ನೀಡಿಕೆ, ಏಳನೇ ನೀಡಿಕೆ ಮತ್ತು ಎಂಟನೇ ನೀಡಿಕೆಗೆ ವಂತಿಗೆಯಾಗಿ"

2. "15ನೇ ಪ್ರಕರಣದಲ್ಲಿ "ಆರು ವರ್ಷಗಳನ್ನು ಮೀರಿ" ಎಂಬ ಪದಗಳ ತರುವಾಯ ಈ ಮುಂದಿನದನ್ನು 1987ರ ಏಪ್ರಿಲ್ ಮೊದಲನೆಯ ದಿನದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು.

"ನಿಯಮಿಸಲಾದ ನಮೂನೆಯಲ್ಲಿರುವ, ನಿಯಮಿಸಲಾದ ವಿಧಾನದಲ್ಲಿ ಪರಿಶೀಲಿಸಲಾದ ಹಾಗೂ ನಿಯಮಿಸಬಹುದಾದಂತಹ ಇತರ ವಿವರಗಳನ್ನು ಒಳಗೊಂಡಿರುವ ನಷ್ಟದ ವಿವರ ಪಟ್ಟಿಕೆಯನ್ನು 18ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಗಿಂತ ಮುಂಚಿತವಾಗಿ ಸಲ್ಲಿಸಲಾಗಿದೆ ಅಥವಾ ಕೃಷಿ ವರಮಾನ ತೆರಿಗೆ ಸಹಾಯಕ ಆಯುಕ್ತರು ಅಥವಾ ಸಂದರ್ಭಾನುಸಾರ ಕೃಷಿ ವರಮಾನ ತೆರಿಗೆ ಉಪ ಆಯುಕ್ತರು ನೀಡಿದಂಥ ವಿಸ್ತರಿಸಲಾದ ಅವಧಿಯೊಳಗೆ ಸಲ್ಲಿಸಲಾಗಿದೆ ಎಂಬ ತೃಪ್ತಿಗೆ ಒಳಪಟ್ಟಿದೆ ಮತ್ತು 18ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿರುವುದು ಯಾವುದೂ ಈ ಬಗ್ಗೆ ಅನ್ವಯಿಸತಕ್ಕದ್ದಲ್ಲ".

3) 66ನೇ ಪ್ರಕರಣದಲ್ಲಿ (1)ನೇ ಉಪ ಪ್ರಕರಣದ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

4. 1958ರ ಕರ್ನಾಟಕ ಮನೋರಂಜನಾತೆರಿಗೆ ಅಧಿನಿಯಮದಲ್ಲಿ (1958ರ ಕರ್ನಾಟಕ ಅಧಿನಿಯಮ 30) 1958ರ ಕರ್ನಾಟಕ ಅಧಿನಿಯಮ 3ರ ತಿದ್ದುಪಡಿ.

(1) 2ನೇ ಪ್ರಕರಣದಲ್ಲಿ (ಇ) ಖಂಡದ ಉಪ ಖಂಡ (iii)ರ ತರುವಾಯ ಈ ಮುಂದಿನದನ್ನು 1997ನೇ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು, ಎಂದರೆ :-

"ವಿವರಣೆ : ಅಂಗೀಕೃತ ಆಟ ಅಥವಾ ಕ್ರೀಡೆ, ಎಂದರೆ ಕ್ರಿಕೆಟ್, ಹಾಕಿ, ಫುಟ್‌ಬಾಲ್, ಬಾಸ್ಕೆಟ್ ಬಾಲ್, ಟೆನ್ನಿಸ್, ಗಾಲ್ಫ್, ಬಿಲಿಯರ್ಡ್ಸ್, ಸ್ನೂಕರ್, ವಾಲಿಬಾಲ್, ಬ್ಯಾಡ್‌ಮಿಂಟನ್, ಕಬಡ್ಡಿ, ಈಜು, ಅಥ್ಲೆಟಿಕ್ಸ್, ಬೇಸ್‌ಬಾಲ್, ವೈಟ್ ಲಿಫ್ಟಿಂಗ್ ಮತ್ತು ಸರ್ಕಾರವು ಅಧಿಸೂಚಿಸಬಹುದಾದ ಯಾವುದೇ ಇತರ ಆಟ ಅಥವಾ ಕ್ರೀಡೆ".

(2) 7ನೇ ಪ್ರಕರಣದಲ್ಲಿ-

(i) (1)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು 1997ನೇ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು, ಎಂದರೆ :-

(i) "ವಿನಾಯಿತಿಗಳು.- (1) ರಾಜ್ಯ ಸರ್ಕಾರವು ಆದೇಶದ ಮೂಲಕ ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ತೃಪ್ತಿಗೆ ಒಳಪಟ್ಟು, ವಾಸ್ತವಿಕ ವೆಚ್ಚಗಳನ್ನು ಕಳೆದ ತರುವಾಯ ಮನೋರಂಜನೆಯ ಪೂರ್ಣ ಒಟ್ಟು ಉತ್ಪತ್ತಿಗಳನ್ನು ರಾಜ್ಯದಲ್ಲಿ ಅಂಗೀಕೃತ ಆಟ ಅಥವಾ ಕ್ರೀಡೆಯ ಪರೋಪಕಾರಿ, ಧಾರ್ಮಿಕ, ಧರ್ಮಾದಾಯ ಅಥವಾ ಅಭಿವೃದ್ಧಿಗೆ

ವಿನಿಯೋಗಿಸಲಾಗುತ್ತಿದೆ ಎಂಬುದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಯಾವುದೇ ಮನೋರಂಜನೆಯ ಪ್ರವೇಶಕ್ಕಾಗಿ ಸಂದಾಯ ಮಾಡಬೇಕಾದ ಮನೋರಂಜನಾ ತೆರಿಗೆಯ ದರದಲ್ಲಿ ತೀಕಡಾ 50 ರಷ್ಟನ್ನು ಮೀರದಂತೆ ಇಳಿತಾಯ ನೀಡಬಹುದು"

ಪರಂತು, ರಾಜ್ಯ ಸರ್ಕಾರವು ವಿಶೇಷ ಸಂದರ್ಭಗಳಲ್ಲಿ ಯಾವುದೇ ಮನೋರಂಜನೆಯ ಮೇಲೆ ಸಂದಾಯವಾಗತಕ್ಕ ಮನೋರಂಜನಾ ತೆರಿಗೆಗೆ ಪೂರ್ಣ ವಿನಾಯಿತಿ ನೀಡಬಹುದು.

ವಿವರಣೆ : "ಧರ್ಮಾದಾಯ ಉದ್ದೇಶಗಳಲ್ಲಿ, ಬಡವರಿಗೆ ನೆರವು, ವೈದ್ಯಕೀಯ ನೆರವು ಮತ್ತು ಶಿಕ್ಷಣಾಭಿವೃದ್ಧಿ ಅಥವಾ ಲಾಭಕ್ಕಾಗಿ ಮಾಡಿದ ಯಾವುದೇ ಕಾರ್ಯಚಟುವಟಿಕೆಯನ್ನು ಒಳಗೊಂಡಿರದ ಸಾರ್ವಜನಿಕ ಉಪಯೋಗದ ಇತರ ಯಾವುದೇ ಉದ್ದೇಶವು ಸೇರುತ್ತದೆ. ಆದಾಗ್ಯೂ ಸಂಪೂರ್ಣ ಅಥವಾ ಸಾಕಷ್ಟು ಧಾರ್ಮಿಕ ಸ್ವರೂಪದ ಯಾವುದೇ ಉದ್ದೇಶವನ್ನು ಇದು ಒಳಗೊಳ್ಳುವುದಿಲ್ಲ."

"(1ಎ) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ ರಾಜ್ಯ ಸರ್ಕಾರದಿಂದ ಅಂಗೀಕೃತವಾದ ಒಂದು ಸಂಸ್ಥೆಯು ಒಂದು ಚಲನ ಚಿತ್ರ ಪ್ರದರ್ಶನವನ್ನು ಶೈಕ್ಷಣಿಕ ಚಲನಚಿತ್ರ ಅಥವಾ ಮಕ್ಕಳ ಚಲನಚಿತ್ರವೆಂಬುದಾಗಿ ಪ್ರಮಾಣೀಕರಿಸಿದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತಹ ಯಾವುದೇ ಅವಧಿಯೊಳಗೆ ಸಂದಾಯವಾಗತಕ್ಕ ಮನೋರಂಜನಾ ತೆರಿಗೆಯ ದರದಲ್ಲಿ ವಿನಾಯಿತಿ ಅಥವಾ ಇಳಿತಾಯ ನೀಡಬಹುದು."

(3) 8-ಬಿ ಪ್ರಕರಣದ (1)ನೇಯ ಉಪ ಪ್ರಕರಣದಲ್ಲಿ "ಉಪ ಆಯುಕ್ತರು" ಎಂಬ ಪದಗಳಿಗೆ "ಜಂಟಿ ಆಯುಕ್ತರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

5. 1979ರ ಕರ್ನಾಟಕ ಭೋಗಭೂಮಿಗಳ ಹೊರೆ ತೆರಿಗೆ ಅಧಿನಿಯಮದಲ್ಲಿ (1979ರ ಅಧಿನಿಯಮ ಸಂಖ್ಯೆ 22).- 1979ರ ಕರ್ನಾಟಕ ಅಧಿನಿಯಮ ಸಂಖ್ಯೆ 22ರ ತಿದ್ದುಪಡಿ.

(1) 2ನೇ ಪ್ರಕರಣದಲ್ಲಿ,-

(i) (1ಎ) ಉಪ ಪ್ರಕರಣದ ವಿವರಣೆಯಲ್ಲಿ "ರಾಜ್ಯ ಸರ್ಕಾರ" ಎಂಬ ಪದಗಳು ಬರುವ ಎರಡು ಕಡೆಗಳಲ್ಲೂ ಅವುಗಳಿಗೆ "ಆಯುಕ್ತರು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(ii) (5ಬಿ) ಉಪ ಪ್ರಕರಣದಲ್ಲಿ "ಅಂಥ ವಿವಾಹ ಅಥವಾ ಆರತಕ್ಷತೆ ಅಥವಾ ಅದಕ್ಕೆ ಸಂಬಂಧಪಟ್ಟ ಕಾರ್ಯಗಳು ನಿಜುತವಾಗಿ ನಡೆದಿರಲಿ ಅಥವಾ ನಡೆಯದಿರಲಿ" ಎಂಬ ಪದಗಳಿಗೆ "ಮತ್ತು ವಿಚಾರಗೋಷ್ಠಿ, ಸಮಾವೇಶ, ಚಿಂತನಕೂಟಗಳು, ಸಭೆಗಳು ಅಥವಾ ಪ್ರದರ್ಶನ ಹಾಗೂ ಮಾರಾಟ ಅಥವಾ ನಿಯತವಾಗಿ ಸಮಾರಂಭಗಳನ್ನು ನಡೆಸಲಾಗುತ್ತಿರುವ ಆಯುಕ್ತರಿಂದ ನಿರ್ದಿಷ್ಟಪಡಿಸಬಹುದಾದಂತಹ ಇತರ ಸಭಾಂಗಣವು (ಹಾಲ್) ಸೇರುತ್ತದೆ." ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.